ಸಿಸಿ ನಂಃ 187/2023
ಸಿ.ಡಬ್ಲೂ 8/
ಪಿ.ಡಬ್ಲೂ 4

# 4 ನೇ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ ಧಾರವಾಡ.

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಆನಂದ |
| ತಂದೆಯ ಹೆಸರು | ಃ | ಮಲ್ಲಿಕಾರ್ಜುನ ಹುಬ್ಬಳ್ಳಿ |
| ವಯಸ್ಸು | ಃ | 23 ವರ್ಷ |
| ಉದ್ಯೋಗ | ಃ | ಖಾಸಗಿ ಕೆಲಸ |
| ವಾಸ ಸ್ಥಳ | ಃ | ಅಮ್ಮಿನಬಾವಿ. |

ಸತ್ಯ ಪ್ರತಿಜ್ಞೆ ಮಾಡಿಸಲಾಯಿತು ಃ **05.03.2025**

**ಮುಖ್ಯ ವಿಚಾರಣೆ ಃ ಮಾನ್ಯ ಹಿಸಸಅ ರವರಿಂದ**

ದಿಃ 08.02.202 ರಂದು ರಾತ್ರಿ 9.00 ರ ಸುಮಾರಿಗೆ ನಾನು , ಗೂಳಪ್ಪ ಮತುತ ಚಾಸಾ9 ರವರು ಚಕ್ಕಡಿಯಲ್ಲಿ ಹೊಲಕ್ಕೆ ಹೊಗುತ್ತಿದ್ದಾಗ ಹಿಂದಿನಿಂದ ಬುಲೇರೊ ವಾಹನ ಬಂದು ಡಿಕ್ಕಿ ಪಡಿಸಿತು. ಆಗ ನನ್ನ ಚಿಕ್ಕಪ್ಪ ಸ್ಥಳದಲ್ಲಿ ಮೃತ ಪಟ್ಟಿರುತ್ತಾರೆ. ನನಗೆ ಹಾಗೂ ಚಾಸಾ9 ರವರಿಗೆ ಗಾಯಗಳಾಗಿರುತ್ತವೆ. ನತಂರ ಈ ವಿಷಯವನ್ನು ನನ್ನ ತಂದೆಯವರಿಗೆ ಪೊನ ಮಾಡಿ ತಿಳಿಸಿರುತ್ತೇನೆ. ನಂತರ ನಮ್ಮನ್ನು ಕಿಮ್ಸ ಆಸ್ಪತ್ರೆಗೆ ದಾಖಲಿಸಿರುತ್ತಾರೆ. ಅಪಘಾತ ಪಡಿಸಿದ ಬುಲೇರೊ ಬಿಳಿ ಬಣ್ಣದಾಗಿದ್ದು ಅದರ ನಂಬರ ನೆನಪಿಲ್ಲ. ಅದರೇ ಸ್ಥಳದಲ್‌ಲ್ ಗಾಡಿಯ ಬಾಗಗಳು ಬಿದ್ದಿದ್ದವು. ನಂತರ ಪೋಲಿಸರು ಸದರಿ ಗಾಡಿಯ ತುಂಡುಗಳನ್ನು ನನಗೆ

ಸಿಸಿ ನಂಃ 187/2023
ಸಿ.ಡಬ್ಲೂ 8/
ಪಿ.ಡಬ್ಲೂ 4

ತೊರಿಸಿರುವುದಿಲ್ಲ. ಸದರಿ ಬುಲೇರೊ ವಾಹನವನ್ನು ಯಾರು ಚಲಾಯಿಸುತ್ತಿದ್ದರು ಎಂದು ಗೊತ್ತಿಲ್ಲ. ತದ ನತಂರ ಸಹ ಯಾರು ಚಲಾಯಿಸುತ್ತಿದ್ದರು ಗೊತ್ತಿಲ್ಲ. ಈ ಬಗ್ಗೆ ಪೋಲಿಸರು ನನಗೆ ಹೇಳಿಕೆ ಪಡೆದಿಲ್ಲ.

**(ಮಾನ್ಯ ಹಿಸಸಅರವರು ಸಾಕ್ಷಿಯನ್ನು ಅಭಿಯೋಜನೆಗೆ ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)**

**ಪಾಟೀಸವಾಲುಃ ಮಾನ್ಯ ಹಿಸಸಅವರಿಂದ**

ದಿಃ 19.02.2025 ರದು ಠಾಣೆ ಗೆ ಕರಸಿ ಬುಲೇರೊ ವಾಹನ ತೊರಿಸಿದರು ಎಂದರೆ ಸರಿಯಲ್ಲ. ಅದೇ ರಿತಿ ಅದೇ ದಿನ ಪೋಲಿಸರು ಸದರಿ ಬುಲೇರೊ ವಾಹನದ ಚಾಲಕ ಸಲ್ಮಾನ ಖಾನ ರಫಿಕ ರವರನ್ನು ತೊರಿಸಿದರು ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಮರು ಹೇಳಿಕೆ ನೀಡಿದ್ದೆನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ.15 ಎಂದು ಗುರುತಿಸಲಾಯಿತು. ನಿಪಿ.15 ರಂತೆ ಹೇಳಿಕೆ ನೀಡಿದ್ದರು ನೀಡಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ.

ಸಿಸಿ ನಂಃ 187/2023
ಸಿ.ಡಬ್ಲೂ 8/
ಪಿ.ಡಬ್ಲೂ 4

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದ**

ಆರೋಪಿ ಪರ ವಕೀಲರು ಪಾಟೀಸವಾಲು ಎನು ಇಲ್ಲ ಎಂದು ತಿಳಿಸಿರುತ್ತಾರೆ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

**( ಆನಂದ ಎಸ್ ಕರಿಯಮ್ಮನವರ್)**
4 ನೇ ಹಿ ದಿ ನ್ಯಾ ಹಾಗೂ ಜೆಎಂಎಫ್‌ಸಿ,
ಧಾರವಾಡ.